# ಒಳ್ಳೆಯತನ

ಒಂದು ವ್ಯಕ್ತಿತ್ವದಲ್ಲಿರಬಹುದಾದ ಮೌಲಿಕತೆ ಮತ್ತು ಅಮೂಲ್ಯ ಸತ್ತ್ವವನ್ನು ಒಳ್ಳೆಯತನವೆಂದು ಕರೆಯಬಹುದು. ಒಳ್ಳೆಯವನೆಂಬುದು ವ್ಯಕ್ತಿತ್ವದ ಘನತೆ ಮತ್ತು ನಡೆಯಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಅದೊಂದು ಗುಣ ಸ್ವಭಾವ. ಈ ಗುಣ ಸ್ವಭಾವ ಸ್ವರೂಪಗಳು ಸದ್ಗುಣದ ನಾನಾ ಬಗೆಯಲ್ಲಿ– ವ್ಯಕ್ತಿತ್ವದಲ್ಲಿ– ಕಾಣಿಸಿಕೊಳ್ಳಬಹುದು. ಒಳ್ಳೆಯತನದ ಮೌಲ್ಯ ನಿರ್ಣಯವಾಗುವುದು ಸೂಕ್ತ ಸಂದರ್ಭದಲ್ಲಿ. ಸತ್ಯಪರವಾದ, ನೀತಿಪರವಾದ ನಿಲುವಿನಲ್ಲಿ; ಭದ್ರವಾಗಿ ನೆಲೆಯೂರಿ ನಿಲ್ಲುವಲ್ಲಿ ವ್ಯಕ್ತಿತ್ವದ ಒಳ್ಳೆಯತನ ಗೋಚರವಾಗುತ್ತದೆ. ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಮಾನವತೆಯ ಪರವಾಗಿ ನಿಲ್ಲುವ ಎದೆಗಾರಿಕೆಯಲ್ಲಿ ಒಳ್ಳೆಯ ವ್ಯಕ್ತಿತ್ವ ಇದೆ. ಕಷ್ಟಕರವಾದ ದೈಹಿಕ– ಮಾನಸಿಕ ನೋವುಗಳನ್ನು ಸಹಿಸುವ ಮತ್ತು ಎದುರಿಸುವ ವ್ಯಕ್ತಿತ್ವದಲ್ಲಿ ಒಳ್ಳೆಯತನವೆಂಬುದು ಗೋಚರವಾಗುತ್ತದೆ. ಒಳ್ಳೆಯತನವಿರುವ ವ್ಯಕ್ತಿತ್ವ ಮೃದುತ್ವಕ್ಕೆ– ಮೃದುವಾಗಿರುತ್ತದೆ. ದುಷ್ಟತನಕ್ಕೆ ಅತ್ಯಂತ ಕಠಿಣವಾಗಿರುತ್ತದೆ. ಒಳ್ಳೆಯತನವಿರುವ ವ್ಯಕ್ತಿತ್ವವು ಕ್ರಿಸ್ತನ ರೀತಿಯ ಅನುಕಂಪ ಮತ್ತು ದಯೆ ಒಳಗೊಂಡಿರುತ್ತದೆ. ಕರ್ಣನಂಥ ಔದಾರ್ಯವನ್ನು, ನೆರವು ನೀಡುವ ಮನಸ್ಸನ್ನೂ ಹೊಂದಿರುತ್ತದೆ.

ಒಳ್ಳೆಯತನವೆಂಬುದು ಮಾನವ ಪರವಾಗಿರುತ್ತದೆ; ಜೀವಪರವಾಗಿ ತುಡಿಯುತ್ತಿರುತ್ತದೆ. ಅದೊಂದು ಘನತರವಾದ ಆದರ್ಶ. ಎಲ್ಲರೂ ಎಲ್ಲರಿಂದಲೂ ಪೂರ್ಣವಾಗಿ ನಿರೀಕ್ಷೆ ಮಾಡುವ ಸದ್ಗುಣ. ಒಳ್ಳೆಯತನಕ್ಕೂ ದಯೆಗೂ ನಿಸ್ವಾರ್ಥತನಕ್ಕೂ ನಿಕಟ ಸಂಬಂಧವಿದೆ. ತನ್ನ ಸ್ವಾರ್ಥ ಮೋಹ ಲಾಲಸೆಗಳನ್ನು ಮೀರಿ ಒಳ್ಳೆಯತನವನ್ನೂ ರೂಢಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಆ ಪ್ರಯತ್ನ ಮಾಡಿದಾಗಲೆಲ್ಲಾ ವ್ಯಕ್ತಿಗತವಾಗಿ ಆಗುವ ನಷ್ಟಗಳ ಲೆಕ್ಕಾಚಾರದಲ್ಲಿ ತೊಡಗುವ ಸ್ವಾರ್ಥ ಮನಸ್ಸು ತನ್ನೊಳಗೆ ಮೂಡುತ್ತಿರುವ ಒಳ್ಳೆಯತನಕ್ಕೆ ಸೆರಗು ಮುಚ್ಚುತ್ತದೆ. ಇಂಥ ಆಸೆ–ಲಾಲಸೆಗಳ ಕಪ್ಪು, ಧೂಳು ಮಿಶ್ರಿತ ಸೆರಗುಗಳು ಸ್ವಚ್ಛ ನಿರ್ಮಲ ಮನಸ್ಸಿನ ಮೇಲೆ ಪಕಳೆ ಪಕಳೆಯಾಗಿ ಆವರಿಸಿಕೊಂಡು ಮನಸ್ಸನ್ನೇ ಕಪ್ಪಾಗಿಸುತ್ತವೆ. ಆಗ ವ್ಯಕ್ತಿತ್ವ ದಿನೇ ದಿನೇ ಕಪ್ಪಾಗತೊಡಗುತ್ತದೆ; ವ್ಯಕ್ತಿತ್ವ ದುಷ್ಟವಾಗಿ 'ತಾನು, ತಾನು ಮಾತ್ರ, ಎಲ್ಲರೂ ಎಲ್ಲವೂ ತನ್ನ ಸುಖಕ್ಕಾಗಿ ಮಾತ್ರ' ಎಂಬ ಭಾವ ಢಾಳವಾಗಿ ಅದೇ ಅಂತಿಮ ಸತ್ಯವೆಂಬ ಭ್ರಮೆಯಲ್ಲಿ ಮುಳುಗುತ್ತದೆ. ದುಷ್ಟತನದ ವಿರಾಟ್ ಸ್ವರೂಪದ ಮಧ್ಯೆ ತನ್ನನ್ನು ಪ್ರತಿಷ್ಠಾಪಿಸಿಕೊಂಡು, ತನ್ನಂತೆಯೇ ಇರುವ ಕಪ್ಪು ಪಡೆಯನ್ನು ಕಟ್ಟಿಕೊಂಡು ಕಪ್ಪು ಸಾಮ್ರಾಜ್ಯವನ್ನು ಆಳುವ ಸ್ಥಿತಿಗೇರುತ್ತದೆ.

ಒಳ್ಳೆಯ ವ್ಯಕ್ತಿತ್ವಕ್ಕೆ ನಮ್ಮ ಪುರಾಣಗಳಲ್ಲಿ ಉತ್ತಮ ಮಾದರಿಗಳಿವೆ. ಒಳ್ಳೆಯತನಕ್ಕೆ ಪರ್ಯಾಯವಾಗಿ ದುಷ್ಟರ ಪಾತ್ರ ಪೋಷಣೆಯಿದೆ. ಈ ದುಷ್ಟರನ್ನು ಸಂಹಾರ ಮಾಡಲೆಂದೇ ಅವತಾರ ಕಲ್ಪನೆಗಳನ್ನು ಸೃಷ್ಟಿ ಮಾಡಲಾಗಿದೆ. ಈ ಅವತಾರ ಪುರುಷರು ದೇವತೆಗಳೇ ಆಗಿರುವುದರಿಂದ ಅವರದು ಕಪ್ಪು ಚುಕ್ಕೆ ರಹಿತ ವ್ಯಕ್ತಿತ್ವ! ಆದರೆ ದೇವತೆಗಳು ದುಷ್ಟರನ್ನು ಸಂಹರಿಸಲು ಅನಿವಾರ್ಯವಾಗಿ ನರಜನ್ಮ ತಾಳಬೇಕಾದುದರಿಂದ, ನರರಿಗೆ ಅನ್ವಯವಾಗುವ ಕೆಲವು ಲೌಕಿಕ ಗುಣಗಳನ್ನು ಅವರಿಗೆ ಆರೋಪಿಸಿ ಅವರನ್ನು ಮಾನವೀಯಗೊಳಿಸಲು ಯತ್ನಿಸಿದೆ. ಆದುದರಿಂದಲೇ ಸೀತೆಯನ್ನು ಕಳೆದುಕೊಂಡ ಶ್ರೀರಾಮ ಸಾಮಾನ್ಯರಂತೆ ದುಃಖಿಸುತ್ತಾನೆ. ಭೀಷ್ಮರ ದಾಳಿಯಿಂದ ಅಸಹಾಯಕರಾದ ಪಾಂಡವರ ಸ್ಥಿತಿಯನ್ನು ಕಂಡ ಕೃಷ್ಣ ಕೋಪಾವಿಷ್ಟನಾಗಿ ಚಕ್ರಧರನಾಗುತ್ತಾನೆ! ಒಳ್ಳೆಯತನದ ನಮ್ಮ ಅತ್ಯುತ್ತಮ ಮಾದರಿಯಾದ ಧರ್ಮರಾಯನು (ಅವನು ವಿಧುರನಂತೆ ರಾಜನೀತಿ/ ಲೋಕನೀತಿ/ ಜೀವ ನೀತಿಯನ್ನು ಅರಿತವನು!) ಅತ್ಯಂತ ದುರ್ಬಲನಂತೆ ಜೂಜಿನ ಗುಲಾಮನಾಗಿ ತೋರುತ್ತಾನೆ. ಇನ್ನು ಪುರುಷೋತ್ತಮನಾದ ಶ್ರೀರಾಮನು ಹೇಡಿಯಂತೆ ಮರದ ಮರೆಯಲ್ಲಿ ನಿಂತು ವಾಲಿಯನ್ನು ಸಂಹಾರ ಮಾಡುತ್ತಾನೆ! ಅಂದರೆ, ಒಳ್ಳೆಯತನವೆಂಬುದು ಒಂದು ಅತ್ಯುನ್ನತ ಆದರ್ಶವೆಂದು ಸಾರಲು ನರ ಮನುಷ್ಯರ ಕೆಲವು ದೌರ್ಬಲ್ಯಗಳನ್ನು ಇಲ್ಲಿ ದೃಷ್ಟಾಂತಗಳಾಗಿ ಬಂದಿವೆಯೆಂದು ತಿಳಿಯಬಹುದು.

ನಮ್ಮ 'ಗೋವಿನ ಹಾಡು' ಕಥನ ಗೀತೆಯಲ್ಲಿ ಬರುವ ಪುಣ್ಯಕೋಟಿಯ ಒಳ್ಳೆಯತನಕ್ಕೆ ನಾಚಿ ದುಷ್ಟವ್ಯಾಘ್ರ ಆತ್ಮಹತ್ಯೆ ಮಾಡಿಕೊಳ್ಳುತ್ತದೆ. ಪುಣ್ಯಕೋಟಿಯ ಕಥೆಯ ಆಶಯ: ಒಳ್ಳೆಯತನದ ಮುಂದೆ ದುಷ್ಟತನ ನಾಶವಾಗುತ್ತದೆ ಎಂಬುದು. ಆದರೆ ಇದಕ್ಕಿಂತ ಭಿನ್ನವಾದ ಪ್ರಸಂಗವೊಂದಿದೆ; ಹಲಸಂಗಿ ಸೋದರರು ಸಂಗ್ರಹಿಸಿ ಪ್ರಕಟಿಸಿರುವ 'ಮಲ್ಲಿಗೆ ದಂಡೆ'ಯ, 'ಆಕಳ ಹಾಡು' ಎಂಬ ಕಥನ ಗೀತೆಯಲ್ಲಿ ಆಕಳಿನ ಒಳ್ಳೆಯತನವನ್ನು ಕಂಡ ದುಷ್ಟ ಹುಲಿರಾಯನ ಮನಸ್ಸು ಪರಿವರ್ತನೆಯಾಗುತ್ತದೆ. ಆಕಳನ್ನು ಸೋದರಿಯೆಂದು ಕರೆದು, ತಿಳಿದು ಸಹಬಾಳ್ವೆ ನಡೆಸುತ್ತದೆ. ಒಳ್ಳೆಯತನದ ಎದುರು ದುಷ್ಟತನವು ಅಳಿದು, ಅದೂ ಕೂಡ ಒಳ್ಳೆಯತನವಾಗುವ ಸ್ಥಿತಿ ಅತ್ಯುತ್ತಮ ಬದುಕುವ ಪರಿ ಎಂದು ನಮ್ಮ ಜನಪದರು ಭಾವಿಸುತ್ತಾರೆ.

■ **ಶಿಕಾಕು**

## ಮಾತೇ ಮುತ್ತು

★ ವೇದಗಳು, ಬೈಬಲ್, ಕುರಾನ್ ಎಲ್ಲಿ ಇಲ್ಲವೋ ಅಲ್ಲಿಗೆ ಮಾನವ ವರ್ಗವನ್ನು ಕರೆದೊಯ್ಯಬೇಕು. ಆದರೆ ಅದನ್ನು ವೇದ, ಬೈಬಲ್, ಕುರಾನ್ ಐಕ್ಯತೆಯಿಂದಲೇ ಸಾಧಿಸಬೇಕಾಗಿದೆ.

–ಸ್ವಾಮಿ ವಿವೇಕಾನಂದ

★ ಬಡವರನ್ನು ಕಾಡುತ್ತಾ ಸಂಪಾದಿಸಿದ ಹಣವನ್ನು ದಾನ ಮಾಡುವುದರಿಂದ ಪುಣ್ಯ ಸಿಕ್ಕುತ್ತದೆಂಬುದು ಭ್ರಮೆ. ಇದನ್ನು ನಿಮ್ಮ ಆತ್ಮವೂ ಒಪ್ಪದು.

–ಅಜ್ಞಾತ

★ ಒಂದು ವಿಷಯ ತಿಳಿಯದಿರುವಾಗ ತಿಳಿದಿಲ್ಲ ಎಂದೂ, ತಿಳಿದಿರುವಾಗ ತಿಳಿದಿದೆ ಎಂದೂ ಒಪ್ಪಿಕೊಳ್ಳುವುದೇ ವಿದ್ಯೆ.

–ಕನ್‌ಫ್ಯೂಷಿಯಸ್

★ ನಿರಾಸೆ ಎನ್ನುವುದು ದೇಹಕ್ಕೆ ಲಕ್ವ ಹೊಡೆದಂತೆ, ಬುದ್ಧಿಯನ್ನು ಮಂಕಾಗಿಸುತ್ತದೆ.

–ಗ್ರೇವಿಲ್

★ ಮನುಷ್ಯ ಸೌಹಾರ್ದಯುತವಾಗಿ ಜೀವನ ನಡೆಸುವುದಕ್ಕಿಂತ ಅಧಿಕ ಸಂತೋಷದ ವಿಚಾರ ಇರಲು ಸಾಧ್ಯವಿಲ್ಲ.

–ಅಲ್ಬರ್ಟ್ ಕಾಮು

★ ಮನುಷ್ಯ ಚಿಕ್ಕವನಾದಂತೆ ಅವನ ಅಹಂಕಾರವೂ ಬೆಳೆಯುತ್ತದೆ.

–ರೋಮೋ

★ ಸಂಪ್ರದಾಯದ ಬಾವಿಯಲ್ಲಿ ತೇಲುವುದು ಒಳ್ಳೆಯದು, ಅದರಲ್ಲಿ ಮುಳುಗುವುದು ಆತ್ಮಹತ್ಯೆ.

–ಮಹಾತ್ಮ ಗಾಂಧೀಜಿ

★ ಕೆಲಸವೊಂದು ಸುಂದರವಾಗಿ ಮುಗಿಯಬೇಕೆಂದಿದ್ದರೆ ಆ ಕೆಲಸವನ್ನು ಸ್ವತಃ ಮಾಡುವುದೊಳ್ಳೆಯದು.

–ನೆಪೋಲಿಯನ್

★ ಮಾನವರ ಬಗ್ಗೆ ಮಂಗಳಕರ ಹಾಗೂ ದಯೆಯ ಭಾವನೆ ಹೊಂದುವುದು ವಾಸ್ತವಿಕ ಧರ್ಮ.

–ವಿನೋಬಾ ಭಾವೆ

★ ಪ್ರಕೃತಿಯ ನಿಯಮ ನ್ಯಾಯವಾದುದಷ್ಟೇ ಅಲ್ಲ, ಭಯಂಕರವೂ ಹೌದು. ಅದರಲ್ಲಿ ದುರ್ಬಲ ದಯೆ ಇರುವುದಿಲ್ಲ.

–ಮಿಲ್ಟನ್

★ ಸವಾಲುಗಳನ್ನು ಸ್ವಾಗತಿಸಿ, ಜಾಣತನದಿಂದ ಕಲಿಯಲು ಮತ್ತು ಬೆಳೆಯಲು ಪ್ರತಿಯೊಂದು ಸನ್ನಿವೇಶದಲ್ಲೂ ಅವಕಾಶಕ್ಕಾಗಿ ಎದುರು ನೋಡುತ್ತಿರಿ.

–ಬ್ರಿಯಾನ್ ಟ್ರೇಸಿ

★ ನಮ್ಮ ಶಕ್ತಿ ಚದುರಂಗದಂತೆ. ನೋಡಿಕೊಂಡು ಏಕಾಗ್ರತೆಯಿಂದ ಕೆಲಸ ಮಾಡಿದರೆ ಗೆಲುವು ಹತ್ತಿರವಾಗುತ್ತದೆ.

–ಎಮರ್ಸನ್